PAPER CLIPPINGS
DEPARTMENT / SUBJECT:
NAME OF THE NEWS PAPER:
DATE: 21/5/2020

### ಕೇಂದ್ರ ಸಚಿವ ಸಂಪುಟ ಸಭೆ: ₹20 ಲಕ್ಷ ಕೋಟಿ ಮೊತ್ತದ ವಿಶೇಷ ಪ್ಯಾಕೇಜ್‌ಗೆ ಅನುಮೋದನೆ

# ಕಲ್ಲಿದ್ದಲು ಗಣಿ ಖಾಸಗಿ ವಲಯಕ್ಕೆ ಮುಕ್ತ

ಪ್ರ. ವಾ. 21-5-2020

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಳೆದವಾರ ಘೋಷಿಸಿದ್ದ ₹ 20ಲಕ್ಷ ಕೋಟಿ ಮೊತ್ತದ ವಿಶೇಷ ಪ್ಯಾಕೇಜ್‌ಗೆ ಬುಧವಾರ ನಡೆದ ಕೇಂದ್ರದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

'ವರಮಾನ ಹಂಚಿಕೆ ಆಧಾರದಲ್ಲಿ ಕಲ್ಲಿದ್ದಲಿನ ವಾಣಿಜ್ಯ ಗಣಿಗಾರಿಕೆ ನಡೆಸುವ ಪ್ರಸ್ತಾವಕ್ಕೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿತು. ಇದರಿಂದ, ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಸರ್ಕಾರಿ ಸ್ವಾಮ್ಯದ ಕೋಲ್ ಇಂಡಿಯಾ ಸಂಸ್ಥೆಯ ಏಕಸ್ವಾಮ್ಯ ಕೊನೆಗೊಳ್ಳಲಿದೆ. ಆರ್ಥಿಕ ವ್ಯವಹಾರಗಳನ್ನು ಕುರಿತ ಸಂಪುಟ ಸಮಿತಿಯು (ಸಿಸಿಇಎ) ಆದಾಯ ಹಂಚಿಕೆ ಆಧಾರದಲ್ಲಿ ಕಲ್ಲಿದ್ದಲು ಮತ್ತು ಲಿಗ್ನೈಟ್ ನಿಕ್ಷೇಪಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಿತ್ತು' ಎಂದು ಸಚಿವಾಲಯದ ಅಧಿಕಾರಿ ತಿಳಿಸಿದ್ದಾರೆ.

'ಕಲ್ಲಿದ್ದಲು ಆಮದು ಮೇಲಿನ ಅವಲಂಬನೆಯನ್ನು ಕೊನೆಗೊಳಿಸುವ ಸಲುವಾಗಿ ಗಣಿಗಳನ್ನು ಹರಾಜು ಮೂಲಕ ಖಾಸಗಿಯವರಿಗೂ ಹಂಚಿಕೆ ಮಾಡಲಾಗುವುದು' ಎಂದು ನಿರ್ಮಲಾ ಸೀತಾರಾಮನ್ ಕಳೆದ ವಾರ ತಿಳಿಸಿದ್ದರು.

'ಇಲ್ಲಿ ಬಿಡ್‌ದಾರರು ಆದಾಯದಲ್ಲಿ ಶೇಕಡಾವಾರು ಎಷ್ಟು ಪಾಲನ್ನು ಸರ್ಕಾರಕ್ಕೆ ನೀಡುತ್ತೇವೆ ಎಂಬುದನ್ನು ಬಿಡ್ ಮಾಡಬೇಕಾಗುತ್ತದೆ. ಕನಿಷ್ಠ ಪ್ರಮಾಣವನ್ನು ಶೇ 4ಕ್ಕೆ ನಿಗದಿಪಡಿಸಲಾಗಿದೆ. ಕೇಂದ್ರದ ಮಾಜಿ ವಿಚಕ್ಷಣ ಆಯುಕ್ತ ಪ್ರತ್ಯೂಷ್ ಸಿನ್ಹಾ ಅವರ ಸಲಹೆಯ ಮೇರೆಗೆ ಆದಾಯ ಹಂಚಿಕೆ ಮಾದರಿಯನ್ನು ರೂಪಿಸಲಾಗಿದೆ' ಎಂದು ಕಲ್ಲಿದ್ದಲು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

'ಇನ್ನು ಮುಂದೆ ಕಲ್ಲಿದ್ದಲಿನ ಮುಕ್ತ ವ್ಯಾಪಾರ ನಡೆಯಲಿದೆ. ಗಣಿಗಾರಿಕೆ ನಡೆಸುವ ಕಂಪನಿಗಳು ಯಾವುದೇ ನಿಬಂಧನೆಗಳಿಲ್ಲದೆ ಕಲ್ಲಿದ್ದಲನ್ನು ಮಾರಾಟ ಅಥವಾ ರಫ್ತು ಮಾಡಬಹುದು' ಎಂದು ಉದ್ಯಮಿಗಳು ಹೇಳಿದ್ದಾರೆ.

ಈ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆಯಾದರೆ ಉದ್ಯೋಗಾವಕಾಶಗಳು ಹೆಚ್ಚಿ, ಗಣಿಗಾರಿಕಾ ವಲಯ ಆರ್ಥಿಕ ಅಭಿವೃದ್ಧಿಗೆ ಪೂರಕವಾ[ಗಲಿದೆ] ಎಂದು ಸಚಿವಾಲಯವು ಪ್ರಕಟಣೆ[ಯಲ್ಲಿ] ಹೇಳಿದೆ.

## ಸಂಪುಟದ ಒಪ್ಪಿಗೆ

- ತುರ್ತು ಸಾಲ ಖಾತ್ರಿ ಯೋಜನೆ (ಇಸಿಎಲ್‌ಜಿಎಸ್) ಅಡಿ ಎಂಎಸ್‌ಎಂಇಗಳಿಗೆ ಶೇ 9.25ರ ಬಡ್ಡಿ ದರದಲ್ಲಿ ಸಾಲ ಒದಗಿಸಲು ₹ 3 ಲಕ್ಷ ಕೋಟಿ
- ಜಮ್ಮು ಕಾಶ್ಮೀರದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಸ್ಥಳೀಯರಿಗೇ ಆದ್ಯತೆ ನೀಡುವ ಕಾನೂನಿಗೆ ಘಟನೋತ್ತರ ಅನುಮೋದನೆ
- ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಹಾಗೂ ಗೃಹನಿರ್ಮಾಣ ಸಾಲ ಸಂಸ್ಥೆಗಳಿಗೆ ₹ 30,000 ಕೋಟಿ ನೆರವು ನೀಡುವ ಯೋಜನೆ
- 8 ಕೋಟಿ ವಲಸೆ ಕಾರ್ಮಿಕರಿಗೆ ತಲಾ 5 ಕೆ.ಜಿ.ಯಂತೆ ಆಹಾರಧಾನ್ಯವನ್ನು ಉಚಿತವಾಗಿ ವಿತರಿಸುವ ಪ್ಯಾಕೇಜ್
- ಆಹಾರ ಸಂಸ್ಕರಣೆಯ ಸಣ್ಣ ಘಟಕಗಳಿಗೆ ಸಾಲಕ್ಕೆ ಜೋಡಿಸಲಾದ ಸಬ್ಸಿಡಿ ಯೋಜನೆಗಾಗಿ ₹ 10,000 ಕೋಟಿ

## 'ನೀಲಿ ಕ್ರಾಂತಿ'ಗೆ ₹20,050 ಕೋಟಿ

ಮೀನುಗಾರಿಕಾ ಕ್ಷೇತ್ರದ ಸುಸ್ಥಿರ ಅಭಿವೃದ್ಧಿಯ ಉದ್ದೇಶದಿಂದ ರೂಪಿಸಿರುವ 'ನೀಲಿ ಕ್ರಾಂತಿ' ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ ಒಟ್ಟಾರೆ ₹ 20,050 ಕೋಟಿ ನೀಡುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ.

'ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿರುವ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ (ಪಿಎಂಎಂಎಸ್‌ವೈ) ಮಾಡಲಾಗುವ ಈ ಹೂಡಿಕೆಯಲ್ಲಿ, ಕೇಂದ್ರ ಸರ್ಕಾರದ ₹ 9,407 ಕೋಟಿ, ರಾಜ್ಯ ಸರ್ಕಾರದ ₹ 4,880 ಕೋಟಿ ಹಾಗೂ ಫಲಾನುಭವಿಗಳ ₹ 5,763 ಕೋಟಿ ಪಾಲು ಇರಲಿದೆ' ಎಂದು ಪ್ರಕಟಣೆ ತಿಳಿಸಿದೆ.

2024ರೊಳಗೆ ಮೀನುಗಾರಿಕಾ ಕ್ಷೇತ್ರದಲ್ಲಿ 15 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ಮೀನುಗಾರರ ಆದಾಯವನ್ನು ದ್ವಿಗುಣಗೊಳಿಸುವುದು ಈ ಯೋಜನೆಯ ಉದ್ದೇಶ ಎಂದು ಹೇಳಲಾಗಿದೆ.